# ಕರ್ನಾಟಕ ವಿದ್ಯುತ್ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಉದ್ದಿಮೆ)

CIN: U85110KA1970SGC001919

KARNATAKA POWER CORPORATION LTD.

ಪ್ರಧಾನ ಕಛೇರಿ: ನಂ.82, ಶಕ್ತಿಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-560 001

ಸಹಾಯವಾಣಿ ಸೇವೆಯು ಕೆಲಸದ ದಿನಗಳಲ್ಲಿ ಬೆಳಿಗ್ಗೆ 10.00 ಗಂಟೆಯಿಂದ ಮಧ್ಯಾಹ್ನ 1.00 ಗಂಟೆ ಮತ್ತು ಮಧ್ಯಾಹ್ನ:2.00 ಗಂಟೆಯಿಂದ ಸಂಜೆ:5.00 ಗಂಟೆ ವರೆಗೆ ಲಭ್ಯವಿರುತ್ತದೆ

ದೂರವಾಣಿ : 080-22355329 ವೆಬ್‌ಸೈಟ್: **https://kpcl.karnataka.gov.in**


ಅಭ್ಯರ್ಥಿಗಳು ಅರ್ಜಿಗಳನ್ನು ಆನ್‌ಲೈನ್ ಮೂಲಕ ಮಾತ್ರ ಸಲ್ಲಿಸತಕ್ಕದ್ದು
ಅರ್ಜಿ ಸಲ್ಲಿಸಲು ಆರಂಭ ದಿನಾಂಕ: 27.02.2023
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 29.03.2023 (ಸಂಜೆ 5.00 ಗಂಟೆ ವರೆಗೆ)

ಸಂಖ್ಯೆ: ಎ1ಪಿ1ಸಿ(ಎಎಲ್‌ಒ)/ ದಿನಾಂಕ:24.02.2023

## ಅಧಿಸೂಚನೆ

### ಗುತ್ತಿಗೆ ಆಧಾರದ ಮೇಲೆ ನೇಮಕಾತಿ

1970ನೇ ಇಸ್ವಿಯಲ್ಲಿ ಸ್ಥಾಪಿತವಾದ ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು (ಕೆಪಿಸಿಎಲ್) ಕರ್ನಾಟಕ ಸರ್ಕಾರದ ಉದ್ದಿಮೆಯಾಗಿದ್ದು, ವಿದ್ಯುತ ಉತ್ಪಾದನೆಯಲ್ಲಿ ತೊಡಗಿದೆ. ಇದರ ಉನ್ನತ ಮಟ್ಟದ ಕಾರ್ಯನಿರ್ವಹಣೆಗಾಗಿ ಹಲವಾರು ಪ್ರತಿಷ್ಠಿತ ಪ್ರಶಸ್ತಿಗಳನ್ನು ಸಹ ಗಳಿಸಿದೆ. ಪ್ರಸ್ತುತ ನಿಗಮದ ಕಾನೂನು ವಿಷಯಗಳಿಗೆ ಸಂಬಂಧಪಟ್ಟ ಕಾರ್ಯಗಳನ್ನು ನಿರ್ವಹಿಸಲು 11 ತಿಂಗಳ ಅವಧಿಗೆ ಗುತ್ತಿಗೆ ಆಧಾರದ ಮೇಲೆ **ಸಹಾಯಕ ಕಾನೂನು ಅಧಿಕಾರಿ** ಹುದ್ದೆಗೆ (02 ಹುದ್ದೆ) ನೇಮಿಸಲು ನಿಗಮ ಉದ್ದೇಶಿಸಿದೆ.

| ಹುದ್ದೆ | ಹುದ್ದೆಗಳ ಸಂಖ್ಯೆ | ನಿಗದಿಪಡಿಸಿದ ಅರ್ಹತೆ ಮತ್ತು ಅನುಭವ |
|---|---|---|
| ಸಹಾಯಕ ಕಾನೂನು ಅಧಿಕಾರಿ | 02 | 1. ಅಂಗೀಕೃತ ವಿಶ್ವವಿದ್ಯಾಲಯದ ಯಾವುದೇ ವಿಷಯದಲ್ಲಿ ಪದವಿ (Any Bachelor's Degree) ಜೊತೆಗೆ ಅಂಗೀಕೃತ ವಿಶ್ವವಿದ್ಯಾಲಯದಿಂದ ಕಾನೂನು ಪದವಿ (Degree in law) ಪಡೆದಿರಬೇಕು.<br>2. ಶೇಕಡ.50 ರಷ್ಟು ಅಂಕಗಳನ್ನು ಕಾನೂನು ಪದವಿ(Degree in law) ಯಲ್ಲಿ ಗಳಿಸಿರಬೇಕು;<br>3. ವಕೀಲ ವೃತ್ತಿಯಲ್ಲಿ ಕನಿಷ್ಠ 05 ವರ್ಷಗಳ ಅನುಭವವಿರಬೇಕು.<br>4. ವಯೋಮಿತಿ: ಕನಿಷ್ಠ 40 ವರ್ಷ ವಯಸ್ಸಾಗಿರಬೇಕು. |

1. **ಅರ್ಜಿ ಸಲ್ಲಿಸುವ ವಿಧಾನ:**

ಅಭ್ಯರ್ಥಿಗಳು ನಿಗಮದ ವೆಬ್‌ಸೈಟ್ **https://kpcl.karnataka.gov.in** ನಲ್ಲಿ ಲಭ್ಯವಿರುವ ಅರ್ಜಿ ನಮೂನೆಯಲ್ಲಿಯೇ ಆನ್‌ಲೈನ್ (online) ಮೂಲಕ ಸಲ್ಲಿಸತಕ್ಕದ್ದು. ಇತರೆ ಯಾವುದೇ ನಮೂನೆಯಲ್ಲಿ ಅರ್ಜಿಯನ್ನು ಸ್ವೀಕರಿಸಲಾಗುವುದಿಲ್ಲ.

2. **ವೇತನ ಹಾಗೂ ಇತರೆ ಸೌಲಭ್ಯಗಳು:**

ಅ. ಸದರಿ ಹುದ್ದೆಗೆ ಮಾಹೆಯಾನ ಸಂಭಾವನೆ ರೂ.45,000/-.

ಆ. ಸಾಂದರ್ಭಿಕ ರಜೆ ತಿಂಗಳಿಗೆ ಒಂದು ಹಾಗೂ 20 ದಿನಕ್ಕೆ ಒಂದು ಗಳಿಕೆ ರಜೆಯನ್ನು (Non cashable) ನೀಡಲಾಗುವುದು.

ಇ. ನೇಮಕ ಹೊಂದಿದ ಅಭ್ಯರ್ಥಿಗಳು ತನ್ನ ಕರ್ತವ್ಯಗಳನ್ನು ನಿರ್ವಹಿಸಲು ಅಗತ್ಯವಿರುವ ಪ್ರಯಾಣಗಳಿಗೆ ನಿಗಮದ ಸಹಾಯಕ ಕಾನೂನು ಅಧಿಕಾರಿ/ಸಹಾಯಕ ಅಭಿಯಂತರರು ಹುದ್ದೆಗೆ ಅರ್ಹವಿರುವ TA/DA ಯನ್ನು ನೀಡಲಾಗುವುದು.

3. ಆಯ್ಕೆ ವಿಧಾನ :

ಸಂದರ್ಶನವನ್ನು ನಡೆಸಿ ಆಯ್ಕೆ ಮಾಡಲಾಗುವುದು.

**ಆದ್ಯತೆ:** ಕರ್ನಾಟಕ ರಾಜ್ಯ ಆಡಳಿತ ನ್ಯಾಯಾಧೀಕರಣದಲ್ಲಿ (ಕೆಎಸ್‌ಎಟಿ) ಹಾಗೂ ಉಚ್ಚ ನ್ಯಾಯಾಲಯದಲ್ಲಿ ಕರ್ನಾಟಕ ಸಿವಿಲ್ ಸೇವಾ ನಿಯಮಗಳ ವೃತ್ತಿಯಲ್ಲಿ ಅನುಭವವಿದ್ದವರಿಗೆ ಹಾಗೂ ಆಂಗ್ಲ ಭಾಷೆಯ ಕಂಪ್ಯೂಟರ್ ಹಾಗೂ ಬೆರಳಚ್ಚು ಅನುಭವವುಳ್ಳವರಿಗೆ ಆದ್ಯತೆ.

4. ಸಲ್ಲಿಸಬೇಕಾದ ದಾಖಲೆಗಳು :

ಅಭ್ಯರ್ಥಿಗಳು ವಯಸ್ಸು, ವಿದ್ಯಾರ್ಹತೆ, ಅನುಭವ ಇತ್ಯಾದಿಗಳಿಗೆ ಸಂಬಂಧಪಟ್ಟಂತೆ ಈ ಕೆಳಕಂಡ ಮೂಲ ದಾಖಲೆಗಳ ಜೊತೆಗೆ – ಸ್ವದೃಢೀಕೃತ (Self attested) ಜೆರಾಕ್ಸ್ ಪ್ರತಿ ಮತ್ತು ಇತ್ತೀಚಿನ ಒಂದು ಭಾವಚಿತ್ರದೊಂದಿಗೆ ಹಾಜರಾಗತಕ್ಕದ್ದು.

i) ಜನ್ಮ ದಿನಾಂಕಕ್ಕೆ ಆಧಾರವಾಗಿ ಹಾಗೂ ಜೇಷ್ಠತೆಯನ್ನು ನಿರ್ಧರಿಸಲು ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯ ಅಂಕಪಟ್ಟಿ.

ii) ನೋಂದಣಿ ಸಂಖ್ಯೆ ಹಾಗೂ ನೋಂದಣಿ ದಿನಾಂಕವುಳ್ಳ ಕರ್ನಾಟಕ ರಾಜ್ಯ ಬಾರ್ ಕೌನ್ಸಿಲ್‌ರವರು ನೀಡಿದ ಮೂಲ ಗುರುತಿನ ಕಾರ್ಡ್

iii) ವಕೀಲ ವೃತ್ತಿಯ 05 ವರ್ಷ ಅನುಭವದ ಬಗ್ಗೆ ಬಾರ್ ಅಸೋಸಿಯೇಷನ್‌ನಿನ ಅಧ್ಯಕ್ಷರ/ಕಾರ್ಯದರ್ಶಿಯ ರವರಿಂದ ಮೂಲ ಪ್ರಮಾಣ ಪತ್ರ ಹೊಂದಿರಬೇಕು.

iv) ಪದವಿ ಮತ್ತು ಕಾನೂನು ವಿಷಯದಲ್ಲಿ ಪದವಿಗೆ ಸಂಬಂಧಪಟ್ಟ ಪ್ರಮಾಣ ಪತ್ರ. (Degree/ Convocation certificate) ಮತ್ತು ಎಲ್ಲಾ ಪರೀಕ್ಷೆಗಳ(ಪ್ರತಿ ವರ್ಷ/ಪ್ರತಿ ಸೆಮಿಸ್ಟರ್‌ಗಳ) ಅಂಕಪಟ್ಟಿಗಳು.

v) ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಿದಾಗ ಪಡೆದ ಸ್ವೀಕೃತಿ ಪತ್ರ (Acknowledgement).

5. ದಾಖಲಾತಿಗಳ ಪರಿಶೀಲನೆ/ಸಂದರ್ಶನಕ್ಕೆ ಹಾಜರಾಗಬೇಕಾದ ಸಂದರ್ಭದಲ್ಲಿ ನಿಗಮದಿಂದ ಅಭ್ಯರ್ಥಿಗಳಿಗೆ ಯಾವುದೇ ಪ್ರಯಾಣ/ದಿನಭತ್ಯೆ (TA/DA) ನೀಡಲಾಗುವುದಿಲ್ಲ.

6. ಅಗತ್ಯ ಸೂಚನೆಗಳು:

ಅ. ಆಯ್ಕೆಯಾದ ಅಭ್ಯರ್ಥಿಗಳನ್ನು ಬೆಂಗಳೂರು ಮತ್ತು ನಿಗಮದ ಯೋಜನಾ ಪ್ರದೇಶಗಳಿಗೆ ನಿಯೋಜಿಸಲಾಗುವುದು.

ಆ. ಈ ಗುತ್ತಿಗೆ ಆದಾರದ ನೇಮಕಾತಿಯು ನಿಗಮದ ನಿಬಂಧನೆ ಮತ್ತು ಷರತ್ತುಗಳಿಗೆ ಒಳಪಟ್ಟಿರುತ್ತದೆ. ಆಯ್ಕೆಯಾದ ಅಭ್ಯರ್ಥಿಗಳು ರೂ.200/– ಮೌಲ್ಯದ ಎಂಬೋಸ್ ಮಾಡಿದ ಛಾಪ ಕಾಗದದಲ್ಲಿ ನಿಗಮದೊಂದಿಗೆ ಸೇವಾ ಒಪ್ಪಂದವನ್ನು ಮಾಡಿಕೊಳ್ಳತಕ್ಕದ್ದು.

ಇ. ಅಭ್ಯರ್ಥಿಯು ಯಾವುದೇ ತಪ್ಪು ಮಾಹಿತಿಯನ್ನು ನೀಡಿರುವುದು ಕಂಡು ಬಂದಲ್ಲಿ ಅದಕ್ಕೆ ಅವನು/ಅವಳ ಗುತ್ತಿಗೆ ನೇಮಕಾತಿಯ ಅನರ್ಹಗೊಳಿಸುವುದಲ್ಲದೆ ಸೂಕ್ತ ಕಾನೂನು ಕ್ರಮವನ್ನು ಜರುಗಿಸಲಾಗುವುದು.

ಈ. ಗುತ್ತಿಗೆ ಆದಾರದ ಮೇಲೆ ನೇಮಕಾತಿಯು ಸಂಪೂರ್ಣವಾಗಿ ತಾತ್ಕಾಲಿಕವಾಗಿದ್ದು ಅಭ್ಯರ್ಥಿಗಳು ಖಾಯಂ ಉದ್ಯೋಗಕ್ಕಾಗಿ ಹಕ್ಕು ಹೊಂದಿರುವುದಿಲ್ಲ.

ಉ. ಅಭ್ಯರ್ಥಿಗಳು ಗುತ್ತಿಗೆ ಅವಧಿಯ ಮಧ್ಯದಲ್ಲಿ ಸೇವೆಯಿಂದ ರಾಜೀನಾಮೆ ಕೊಡಲು ಇಚ್ಛಿಸಿದಲ್ಲಿ ಒಂದು ತಿಂಗಳ ಮೊದಲು ನೋಟಿಸ್ ನೀಡತಕ್ಕದ್ದು.

ಊ. ನಿಗಮವು ಈ ಗುತ್ತಿಗೆ ಆದಾರದ ನೇಮಕಾತಿಯನ್ನು ಭಾಗಶಃ/ಪೂರ್ಣವಾಗಿ ಯಾವುದೇ ಹಂತದಲ್ಲಿ ಯಾವುದೇ ಕಾರಣ ನೀಡದೆ ರದ್ದುಪಡಿಸುವ ಅಧಿಕಾರವನ್ನು ಹೊಂದಿದೆ.

ನಿರ್ದೇಶಕರು(ಮಾ.ಸಂ.) 24/2/23.